ಇ) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಯಕ್ಕುಂಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಎಸ್‌ಹೆಚ್‌ಹೆಚ್ 2006, ದಿನಾಂಕ: 29.06.2006 ರಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ಸವದತ್ತಿಯಲ್ಲಿ ಈಗಾಗಲೇ ಕಲಾ ಕಾಲೇಜು ಇರುತ್ತದೆ. 2006–07ನೇ ಸಾಲಿನಿಂದ ವಿಜ್ಞಾನ ವಿಭಾಗವನ್ನೂ ಸಹ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ಹುಲಿಕಟ್ಟೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆಯು ಶೈಕ್ಷಣಿಕ ಅಗತ್ಯತೆ ಹಾಗೂ ಪ್ರಸಕ್ತ ಸಾಲಿನ ಆಯವ್ಯಯದ ಲಭ್ಯತೆಗಳನ್ನು ಅವಲಂಬಿಸಿದೆ.

838 (1041) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಲಪ್ರಭಾ ಜಲಾಶಯದಲ್ಲಿ ಇತ್ತೀಚಿನ ಮಳೆಯ ಅಭಾವದಿಂದ ನೀರು ಸಂಗ್ರಹಣೆ ಕಡಿಮೆಯಾಗಿ ರೈತರಿಗೆ ಸಾಕಷ್ಟು ತೊಂದರೆಯಾಗುತ್ತಿರುವುದು ಮತ್ತು ಕುಡಿಯುವ ನೀರಿನ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಮಲಪ್ರಭಾ ನದಿಗೆ ಕಳಸಾ ಭಂಡೂರಿ ನಾಲೆಯನ್ನು ಜೋಡಿಸುವುದರ ಮೂಲಕ ಈ ಸಮಸ್ಯೆಗೆ ಪರಿಹಾರ ನೀಡಲಾಗುವುದೇ:

ಇ) ಕಳಸಾ–ಭಂಡೂರಿ ನಾಲೆಯನ್ನು ಮಲಪ್ರಭಾ ನದಿಗೆ ಜೋಡಿಸುವ ಕುರಿತು ಸರ್ಕಾರದ ಕ್ರಮವೇನು?

ಶ್ರೀ ಕೆ. ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಬಂದಿದೆ.

ಆ) ಕಳಸಾ–ಭಂಡೂರಿ ನಾಲಗಳನ್ನು ಮಲಪ್ರಭಾ ನದಿಗೆ ಜೋಡಿಸುವ ಮೂಲಕ ಈ ಸಮಸ್ಯೆಗೆ ಪರಿಹಾರ ನೀಡಲು ಪ್ರಯತ್ನಿಸಲಾಗುತ್ತಿದೆ.

ಇ) ಕೇಂದ್ರ ಜಲ ಆಯೋಗವು ಈ ಹಿಂದೆ 7.56 ಟಿಎಂಸಿ ನೀರಿನ ಬಳಕೆಗೆ ನೀಡಲಾಗಿದ್ದ ತಾತ್ವಿಕ ಒಪ್ಪಿಗೆಯನ್ನು ತಡೆಹಿಡಿದಿದ್ದು, ಸರ್ಕಾರದ ಮಟ್ಟದಲ್ಲಿ ಇದನ್ನು ತೆರೆವುಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದನ್ನು ತೆರವುಗೊಳಿಸಿದ ನಂತರ ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

839 (1300) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮ್ನಾಬಾದ್): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಮ್ನಾಬಾದ್‌ನಲ್ಲಿ ಪದವಿ ಕಾಲೇಜ್ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಗಡಿ ತಾಲ್ಲೂಕಿನಲ್ಲಿ ಕಾಲೇಜು ಪ್ರಾರಂಭವಾಗದಿರಲು ಕಾರಣವೇನು;

ಇ) ಪದವಿ ಕಾಲೇಜು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಗಡಿ ಪ್ರದೇಶವಾದ ಹುಮ್ನಾಬಾದಿನಲ್ಲಿ ಹಾಲಿ ಒಂದು ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಕಾಲೇಜುಗಳಿದ್ದದರಿಂದ, ಸದರಿ ಸ್ಥಳದಲ್ಲಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಅಗತ್ಯ ಕಂಡುಬಂದಿರಲಿಲ್ಲ.

ಇ) ಪರಿಶೀಲನಾ ನಂತರ ಸೂಕ್ತ ನಿರ್ಧಾರ ಕೈಗೊಳ್ಳಲಾಗುತ್ತದೆ.

840 (1302) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮ್ನಾಬಾದ್): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾರಂಜಾ ಯೋಜನೆಗೆ ಇದುವರೆಗೆ ಖರ್ಚಾಗಿರುವ ಹಣ ಎಷ್ಟು ಹಾಗೂ ಯೋಜನೆ ಪೂರ್ಣಗೊಳಿಸಲು ಇನ್ನೂ ಬೇಕಾಗಿರುವ ಒಟ್ಟು ಹಣವೆಷ್ಟು;

ಆ) ಈ ಯೋಜನೆ ವಿಳಂಬವಾಗಲು ಕಾರಣವೇನು;

ಇ) ಈ ಯೋಜನೆ ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಹಾಗೂ ಇನ್ನೂ ಎಷ್ಟು ಹಣ ಬೇಕಾಗುತ್ತದೆ (ಕಾಮಗಾರಿವಾರು ವಿವರ ನೀಡುವುದು)?

ಶ್ರೀ ಕೆ. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಕಾರಂಜಾ ಯೋಜನೆಗೆ ಮೇ–2006ರವರೆಗೆ ರೂ. 440.40 ಕೋಟಿಗಳು ವೆಚ್ಚ ಮಾಡಲಾಗಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ ರೂ. 42.07 ಕೋಟಿಗಳು ಬೇಕಾಗಿರುತ್ತದೆ.

ಆ) ಈ ಯೋಜನೆ ವಿಳಂಬವಾಗಲು ಪ್ರಮುಖ ಕಾರಣಗಳು ಕೆಳಗಿನಂತಿವೆ

(1) ಯೋಜನೆಯ ಪ್ರಾರಂಭ (1971–72 ದಿಂದ 1997ರ ವರೆಗೆ ವಾರ್ಷಿಕ ಅನುದಾನದ ಕೊರತೆ.

(2) ಹಲವಾರು ಭೂಸ್ವಾಧೀನ ಪ್ರಕರಣಗಳಲ್ಲಿ ಅಂತಿಮಗೊಳ್ಳುವಲ್ಲಾದ ವಿಳಂಬ

(3) 2000 ರಿಂದ 2002ರವರೆಗೆ ತಾಂತ್ರಿಕ ಸಿಬ್ಬಂದಿಯ ಕೊರತೆ.